**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**PCR 22/2024**

| | | |
|---|---|---|
| ಸಾಕ್ಷಿಯ ಹೆಸರುಃ | ಪುಷ್ಪ | ಪ್ರಾಸಾಃ 1 |
| ಗಂಡನ ಹೆಸರುಃ | ನಾರಾಯಣ | |
| ವಯಸ್ಸುಃ | 36 ವರ್ಷ | ಪ್ರಮಾಣೀಕರಿಸಿದ<br>ದಿಃ 20/12/2025 |
| ಉದ್ಯೋಗಃ | ಅಂಗನವಾಡಿ ಕಾರ್ಯಕರ್ತೆ | |
| ವಾಸ ಸ್ಥಳಃ | ನಾಗನಹಳ್ಳಿ ಪಾಳ್ಯ ಗ್ರಾಮ,<br>ಪಿರಿಯಾಪಟ್ಟಣ ತಾಲ್ಲೂಕು | |

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆಃ**

ನಾನು ನಾಗನಹಳ್ಳಿ ಪಾಳ್ಯದಲ್ಲಿ 12 ವರುಷಗಳಿಂದ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನಾನು ಮತ್ತು ನಾಗನಹಳ್ಳಿ ಗ್ರಾಮದ 14 ಜನ ಮಹಿಳೆಯರು ಸೇರಿ ಶ್ರೀ ಮಲ್ಲಿಕಾರ್ಜುನ ಮಹಿಳಾ ಸ್ವ ಸಹಾಯ ಸಂಘ ತೆರೆದಿದ್ದೆವು. ಆ ಸಂಘಕ್ಕೆ ಮೊದಲನೇ ಪ್ರತಿನಿಧಿಯಾಗಿ ವೇದಾವತಿ ಮತ್ತು 2 ನೇ ಪ್ರತಿನಿಧಿಯಾಗಿ ಶಶಿ ಎಂಬುವವರು ಆಯ್ಕೆ ಆಗಿದ್ದರು. ನಾನು ಆ ಸಂಘದಲ್ಲಿ ಸದಸ್ಯೆ ಆಗಿದ್ದೆ. ಬೆಟ್ಟದಪುರದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ವೇದಾವತಿ ಮತ್ತು ಶಶಿಯವರ ಹೆಸರಿನಲ್ಲಿ ನಮ್ಮ ಸಂಘದ ಹೆಸರಿಗೆ ಉಳಿತಾಯ ಖಾತೆಯನ್ನು ತೆರೆದಿದ್ದೆವು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ನಮ್ಮ ಸಂಘಕ್ಕೆ ರೂ.1,50,000/- ಸಾಲವಾಗಿ ಪಡೆದಿದ್ದೆವು. ನಂತರ ನಾವು ಅರ್ಧ ಸಾಲವನ್ನು ಕಟ್ಟಿ ಕೊರೋನ ಬಂದಿದ್ದರಿಂದ ಉಳಿಕೆ ರೂ.1,10,000/- ಬಾಕಿ ಇತ್ತು. ಕೊರೋನಾ ಇದ್ದುದ್ದರಿಂದ ಬಾಕಿ ಸಾಲದ ಹಣವನ್ನು ಪಾವತಿಸಿಲ್ಲ. ಕರ್ನಾಟಕ ಸರಕಾರದ ಆಧಿ ಜಾಂಭವ ನಿಗಮ ಮಂಡಳಿಯಿಂದ

ರೂ.2,50,000/- ಗಳ ಸಹಾಯ ಧನ ನಮ್ಮ ಸಂಘಕ್ಕೆ ಕೊಡಬೇಕಾಗಿ ಅರ್ಜಿ ಸಲ್ಲಿಸಿದ್ದೆವು. ಸದರಿ ಆಧಿ ಜಾಂಭವ ನಿಗಮ ಮಂಡಳಿಯಿಂದ ನಮಗೆ ರೂ.2,50,000/- ಸಹಾಯ ಧನ ಬಂದಿರುತ್ತದೆ. ಕೊರೋನಾ ವಾರಿಯರ್ ಆಗಿ ನಾವು ಕೆಲಸ ಮಾಡುತ್ತಿದ್ದೆವು, ಆಗ ಹಣದ ಅವಶ್ಯಕತೆ ಇದ್ದುದ್ದರಿಂದ, ದಿಃ 02.12.2021 ರಂದು ನನ್ನ ಸ್ವಂತ ಖಾತೆಗೆ ರೂ.1,40,000/- ಹಣವನ್ನು ಸದರಿ ಸಹಾಯ ಧನದಿಂದ ಜಮಾ ಮಾಡಿರುತ್ತಾರೆ. ನಂತರ ನಾನು ಸದರಿ ರೂ.1,40,000/- ಹಣವನ್ನು ತಲಾ ರೂ.10,000/- ದಂತೆ ಆರೋಪಿತರಿಗೆ ನಗದಾಗಿ ನೀಡಿರುತ್ತೇನೆ. ನಂತರ 14 ಆರೋಪಿತರು ತಲಾ ರೂ.720/- ಹಣವನ್ನು ನನಗೆ ಸಾಲವಾಗಿ ನೀಡಿದರು. ಆರೋಪಿತರು ತಲಾ ರೂ.10,000/- ಹಣ ಪಡೆದಿರುವ ಬಗ್ಗೆ ಲಿಖಿತ ಬರವಣಿಗೆ ಬರೆದು ಸಹಿ ಮಾಡಿ ಕೊಟ್ಟಿದ್ದರು.

ಆದಾದ 2 ವರುಷಗಳ ನಂತರ ಸಾಲಕ್ಕೆ ಬಡ್ಡಿ ಸೇರಿಸಿ ಕಟ್ಟಬೇಕೆಂದು ಆದಿ ಜಾಂಭವ ನಿಗಮ ಮಂಡಳಿಯವರು ಬೆಟ್ಟದಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ತಿಳಿಸಿದ್ದರು. ಸದರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದವರು ನಮಗೆ ಸಾಲವನ್ನು ಬಡ್ಡಿ ಸಮೇತ ಕಟ್ಟಬೇಕೆಂದು ತಿಳಿಸಿದರು. ಆಗ ನಾನು ಮತ್ತು 14 ಜನ ಆರೋಪಿತರು ಸೇರಿ ಮಾತನಾಡಿದೆವು. ನಂತರ ನಾವೆಲ್ಲಾ ಕಾಲಾವಕಾಶ ಕೇಳಿ ಸಮಯ ಪಡೆದೆವು. 2 ನೇ ಬಾರಿ ನಾನು ಮತ್ತು ಆರೋಪಿತರು ಸೇರಿ ಮಾತನಾಡಿದಾಗ ಅವರೆಲ್ಲರೂ ನಾವು ಕಟ್ಟುವುದಿಲ್ಲ, ನೀನೆ ಕಟ್ಟಿಕೊ ಎಂದು ತಿಳಿಸಿದ್ದರು. ಆರೋಪಿತರೆಲ್ಲರೂ ಆದಿ ಜಾಂಭವ ನಿಗಮ ಮಂಡಳಿಗೆ ಹೋಗಿ ನನ್ನಿಂದ ಹಣ ವಸೂಲಿ ಮಾಡಲು ತಿಳಿಸಿದರು. ಮಂಡಳಿಯವರು 2 ಬಾರಿ ನನಗೆ ನೋಟೀಸು ನೀಡಿ ನನ್ನ ಖಾತೆಗೆ ಬಂದ ಹಣವನ್ನು ನಾನು ದುರ್ಬಳಕೆ ಮಾಡಿಕೊಂಡಿದ್ದೇನೆ ಎಂದು ತಿಳಿಸಿ ಕಾನೂನು ಕ್ರಮ ತೆಗೆದು ಕೊಳ್ಳುವುದಾಗಿ ಹೇಳಿದ್ದರು. ನಾನು ಪ್ರತ್ಯುತ್ತರ ನೀಡಿ ಆರೋಪಿತರಿಗೆ ಸಮವಾಗಿ ಹಣ ಹಂಚಿರುವ ಬಗ್ಗೆ ಮತ್ತು ಅವರು ಸಹಿ ಮಾಡಿ ಬರೆದು ಕೊಟ್ಟಿರುವ ಬಗ್ಗೆ ತಿಳಿಸಿದೆ. ಇದಾದ ನಂತರ ಆರೋಪಿತರು ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ದೂರು ನೀಡಿದ್ದರು. ನಾನು

ಆರೋಪಿತರು ಹಣ ಪಡೆದು ಬರೆದುಕೊಟ್ಟ ಬಗ್ಗೆ ತಿಳಿಸಿದ ನಂತರ ನನಗೂ ಮತ್ತು ಆರೋಪಿತರಿಗೂ ಬುದ್ದಿವಾದ ಹೇಳಿ ಕಳುಹಿಸಿದ್ದರು.

ದಿಃ 09.06.2023 ರಂದು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ದೇವರಾಜು ರವರ ಕುಮ್ಮಕ್ಕಿನ ಮೇರೆಗೆ ಆರೋಪಿತರು ನಮ್ಮ ಮನೆಗೆ ಏಕಾ ಏಕಿ ರಾತ್ರಿ 9.00 ಗಂಟೆಗೆ ನುಗ್ಗಿ ನನ್ನ ಮೇಲೆ ಹಲ್ಲೆ ಮಾಡಲು ಶುರು ಮಾಡಿದರು. ಶಶಿ ಯವರು ನನ್ನ ಕೈಯಲ್ಲಿದ್ದ ಓಪ್ಪೋ ಮೊಬೈಲನ್ನು ಕಿತ್ತು ಕೊಂಡರು. ರೇಣುಕಾ, ದೇವಮ್ಮ, ಸುಮ ಮತ್ತು ವೇದಾವತಿಯವರು ನನ್ನ ಕುತ್ತಿಗೆಯನ್ನು ಹಿಡಿದು ನನ್ನ ಕುತ್ತಿಗೆಯಲ್ಲಿದ್ದ 33 ಗ್ರಾಂ ಚಿನ್ನದ ತಾಳಿ ಸರವನ್ನು ಕಿತ್ತುಕೊಂಡರು. ಉಳಿದವರು ಅವಾಚ್ಯ ಶಬ್ದಗಳಿಂದ ಬೈದರು. ಸದರಿ ಗಲಾಟೆಯನ್ನು ನನ್ನ ಗಂಡ, ನಮ್ಮ ಊರಿನ ಪಾಪಯ್ಯ ಮತ್ತು ಪ್ರಶಾಂತ್ ರವರು ಬಿಡಿಸಿದರು. ಅದೇ ರಾತ್ರಿ ನಾನು ಬೆಟ್ಟದಪುರ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದೆ. ಪೋಲೀಸರು ಸ್ವೀಕೃತಿ ನೀಡಿದರು, ಆದರೆ ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳಲಿಲ್ಲ. ಪ್ರತಿದಿನ ಆರೋಪಿತರು ತಕರಾರು ಮಾಡುತ್ತಿದ್ದರು, ಆದ್ದರಿಂದ ನಾನು ಎಸ್ ಪಿ, ಮೈಸೂರು ರವರನ್ನು ಸಂಪರ್ಕಿಸಿ ಲಿಖಿತ ದೂರನ್ನು ಸಲ್ಲಿಸಿದೆ. ಅವರು ಡಿ ವೈ ಎಸ್ ಪಿ ಗೆ ಸೂಚಿಸಿದರು. ಅವರೂ ಸಹ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಆದಕಾರಣ ನಾನು ನ್ಯಾಯಾಲಯಕ್ಕೆ ಬಂದೆ. ನ್ಯಾಯಾಲಯದ ಆದೇಶದಂತೆ ಬೆಟ್ಟದಪುರ ಠಾಣೆಯಲ್ಲಿ ದೂರು ದಾಖಲಿಸಿದೆ. ದಿಃ 30.03.2024 ರಂದು 14 ಜನ ಆರೋಪಿತರು ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ದೇವರಾಜುರವರ ವಿರುದ್ಧ ಪ್ರಥಮ ವರ್ತಮಾನ ವರದಿ ಯನ್ನು ದಾಖಲಿಸಿದ್ದಾರೆ. ಪೋಲೀಸರು ಮಹಜರು ಕ್ರಮ ಜರುಗಿಸಲಿಲ್ಲ. ದಿಃ 16.08.2024 ರಂದು ಗಲಾಟೆ ಆದ ಸ್ಥಳಕ್ಕೆ ಪೋಲೀಸರು ಬಂದಿದ್ದರು. ಆಗ ನಾನು ಹಾಜರಿದ್ದೆ. ಪಾಪಯ್ಯ, ಪ್ರಶಾಂತ ಮತ್ತು ನನ್ನ ಗಂಡನನ್ನು ವಿಚಾರಿಸಿದರು. ನನ್ನಿಂದ ಯಾವುದೇ ಹೇಳಿಕೆ ಪಡೆದಿಲ್ಲ. ಅವರು ತಮ್ಮ ಹೇಳಿಕೆಯಲ್ಲಿ ದಿಃ 09.06.2023 ರಂದು ಗಲಾಟೆ ಬಿಡಿಸಿದೆವು ಎಂದು ತಿಳಿಸಿದ್ದರೂ ಸಹ ಪೋಲೀಸರು ಅವರ ಹೇಳಿಕೆಯನ್ನು ಪಡೆಯಲಿಲ್ಲ. ಪೋಲೀಸರು ತಮ್ಮ ಇಷ್ಟಾನುಸಾರ ವರದಿಯನ್ನು ಸಲ್ಲಿಸಿದ್ದಾರೆ. ಧರ್ಮ ಮತ್ತು ಲೊಕೇಶ ರವರಿಂದ ಯಾವುದೇ ಹೇಳಿಕೆ ಪಡೆಯದಿದ್ದರೂ ಅವರ ಹೇಳಿಕೆಗಳನ್ನು

ಪಡೆದಿದ್ದೇವ ಎಂದು ಪೋಲೀಸರು ತಿಳಿಸಿದ್ದರು. ಆರೋಪಿತರು ಪ್ರಾಬಲ್ಯವಾಗಿದ್ದು ಪೋಲೀಸರೊಂದಿಗೆ ಶಾಮೀಲಾಗಿ ಸತ್ಯ ಮಾರೆ ಮಾಚಲು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಈ ಪ್ರಕರಣದ ಸಂಬಂಧ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಆರೋಪಿತರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗಿ ವಿನಂತಿ.

ಸಾಕ್ಷಿಯು ಸೂಚನಾ ತಿಳುವಳಿಕೆ ಪತ್ರ, ಸ್ವೀಕೃತಿ, ದೂರು, ಒಪ್ಪಿಗೆ ಪತ್ರ, ಬ್ಯಾಂಕ್ ಚಲನ್, ಖಾತೆಯ ಸ್ಟೇಟ್ ಮೆಂಟ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಹಿತಿಯ ಪತ್ರ, ದೂರು, 15 ಅಂಚೆ ರಸೀದಿಗಳು, ಅಂಚೆ ಸ್ವೀಕೃತಿ, ಗಾಯದ ಪ್ರಮಾಣ ಪತ್ರ, ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-1** ರಿಂದ **ನಿಪಿ-26** ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.